ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 19.06.2023

**ಪಾಟೀ ಸವಾಲು ಪ್ರತಿವಾದಿ ಪರ : ಶ್ರೀ ಎಫ್. ಎಂ. ಎಂ. ವಕೀಲರಿಂದಃ**

1) ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನನ್ನನು ಹಾನಗಲ್ ತಾಲೂಕು ಹೇರೂರು ಗ್ರಾಮದ ಚೆನ್ನಪ್ಪ ಗಿರಿಗೊಂಡರ ಎಂಬುವವರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ಗಂಡ ವ್ಯವಸಾಯ ಮಾಡುತ್ತೇವೆ ಎಂದರೆ ಸರಿ. ನನ್ನ ಗಂಡನ ಮನೆತನಕ್ಕೆ ನಾಲ್ಕು ಎಕರೆ ಜಮೀನು ಇದೆ ಎಂದರೆ ಸರಿ. ನನ್ನ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಹೇರೂರು ಗ್ರಾಮ ಮತ್ತು ಚೆನ್ನಪ್ಪ ಗಿರಿಗೊಂಡರ ವಿಷಯವನ್ನು ಬರೆಸಿರುವುದಿಲ್ಲ ಎಂದರೆ ಸರಿ. ನಾನು ಕನ್ನಡದಲ್ಲಿ ಮೂಕಮ್ಮ ಎಂದು ಸಹಿ ಮಾಡುತ್ತೇನೆ ಎಂದರೆ ಸರಿ. ನನ್ನ ತಂಗಿ ರತ್ನವ್ವ ಇವಳು ರತ್ನ ಎಂದು ಸಹಿ ಮಾಡುತ್ತಾಳೆ ಎಂದರೆ ಸರಿ. ನಾವು ಸಹಿ ಮಾಡುವ ಪೂರ್ವದಲ್ಲಿ ದಾಖಲೆಯನ್ನು ಓದಿ, ತಿಳಿದುಕೊಂಡು ಅವು ಸರಿ ಇದ್ದರೆ ಸಹಿ ಮಾಡುತ್ತೇವೆ ಎಂದರೆ ಸರಿ.

2) ನಮಗೂ ಮತ್ತು 1 ನೇ ಪ್ರತಿವಾದಿಯವರ ನಡುವೆ ನಮ್ಮ ಮಗನ ಲಗ್ನವಾಗುವವರೆಗೂ ಒಳ್ಳೆಯ ಭಾಂದವ್ಯ ಇತ್ತು ಎಂದರೆ ಸರಿ. ನನ್ನ ಮಗನ ಮದುವೆ ಕಾಲಕ್ಕೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಮಗನ ಲಗ್ನದಲ್ಲಿ ಎರಡುವರೆ ತೊಲೆ ಬಂಗಾರದ ಹಾಕಿರುತ್ತಾನೆ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ನಾನು ಮತ್ತು 2 ನೇ ಪ್ರತಿವಾದಿ ಜೊತೆಯಾಗಿ ಬಂದಿರುತ್ತೇವೆ ಎಂದರೆ ಸರಿ. 2 ನೇ ಪ್ರತಿವಾದಿ ನಮ್ಮ ಜೊತೆ ಮಿಲಾಪಿಯಾಗಿ ಈ ದಾವೆ ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತ ಇದ್ದಾಗ 2 ನೇ ಪ್ರತಿವಾದಿ ದಾವೆ ಮಾಡಿಸಿದ್ದ ಎಂದರೆ ಸರಿ. 2 ನೇ ಪ್ರತಿವಾದಿ ಒಕ್ಕಲುತನ ಮಾಡಲು ಅಸಮರ್ಥನಿರುವುದರಿಂದ ಬೆಂಗಳೂರಿನಲ್ಲಿ ವಾಸವಾಗಿದ್ದ ಎಂದರೆ ಸರಿ. ಬೆಂಗಳೂರಿನಲ್ಲಿ 2 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಜಗಳವಾಗಿ ಬೇರೆ ಬೇರೆ ವಾಸವಾಗಿದ್ದ ಎಂದರೆ ಸರಿ. ನಂತರ 2 ನೇ ಪ್ರತಿವಾದಿ ರಸ್ತೆ ಅಪಘಾತದಲ್ಲಿ ಕಾಲು ಮುರಿದುಕೊಂಡಿರುತ್ತಾನೆ ಎಂದರೆ ಸರಿ . 2 ನೇ ಪ್ರತಿವಾದಿಯ ವೈದ್ಯಕೀಯ ಉಪಚಾರ 1 ನೇ ಪ್ರತಿವಾದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

3) ಕಮಲವ್ವ ಮತ್ತು ಶಾಂತವ್ವನ ಮಧ್ಯ ದಾವಾ ಆಸ್ತಿಯಲ್ಲಿ ಹಿಸ್ಸೆಯಾದ ಬಗ್ಗೆ ನೊಂದಾದ ಪತ್ರ ಅಥವಾ ನ್ಯಾಯಾಲಯದ ಡಿಕ್ರಿ ಇಲ್ಲ ಎಂದರೆ ಸರಿ . ಕೇವಲ ವರದಿ ಆಧಾರದ ಮೇಲೆ ಹಿಸ್ಸೆ ಆಗಿದೆ ಅಂತಾ ಇದೆ ಎಂದರೆ ಸರಿ. ಸದರಿ ವರದಿಯಲ್ಲಿ ಯಾವ ದಿಕ್ಕಿಗೆ ಆಸ್ತಿ ಬಂದಿದೆ ಎಂದು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ 5 ರಿಂದ 6 ವರ್ಷಗಳಿಂದ ದಾಖಲೆಗಳನ್ನು ನೋಡಿರುತ್ತೇನೆ. ಪ್ರತಿವಾದಿಯರು ನಮ್ಮ ಒಪ್ಪಿಗೆ ಪಡೆದು ದಾವಾ ಆಸ್ತಿಯ ಖಾತೆ ಬದಲಾವಣೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ತಾಯಿ ಪ್ರತಿವಾದಿಯರಿಗೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4) ಸಾಕ್ಷಿಗೆ ವಾದ ಪತ್ರದಲ್ಲಿಯ ಮೊದಲ ಪುಟದಲ್ಲಿನ ಸಹಿಯನ್ನು ತೋರಿಸಲಾಗಿ ಅದನ್ನು ನೋಡಿ ಸಾಕ್ಷಿ ಗುರುತಿಸಿದ ಮೇರೆದ ವಾದ ಪತ್ರವನ್ನು ನಿಡಿ-1 ಎಂದು, ಸಾಕ್ಷಿಗಳ ಸಹಿಗಳನ್ನು ನಿಡಿ-1(ಎ) ಮತ್ತು ನಿಡಿ-1(ಬಿ) ಎಂದು ಗುರುತಿಸಲಾಯಿತು. ನಾವು ಮತ್ತು ನನ್ನ ತಾಯಿ 2012 ರಲ್ಲಿ ಪ್ರತಿವಾದಿಯರಿಗೆ ಊರ ಹಿರಿಯರ ಸಮಕ್ಷಮ ಹಕ್ಕು ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಮುಂದುವರಿದ ಬೋರ ತೆಗೆಸಲು ಸಹಿ ಪಡೆದಿರುತ್ತಾರೆ ಎಂದು ಸಾಕ್ಶ್ಯನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.